## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ಇವರು ನಿಯಮ 330 ರಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ

**ಸೂಚನೆ:** ರಾಜ್ಯದಲ್ಲಿ ನಗರಾಭಿವೃದ್ಧಿ ಮತ್ತು ನಗರ ಯೋಜನೆ ವ್ಯಾಪ್ತಿಗೆ ಬರುವ ಪ್ರಾಧಿಕಾರಗಳು ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಯೋಜನಾ ನಕ್ಷೆ ಸಿದ್ಧಪಡಿಸಿದ್ದಲ್ಲಿ ಅನಧಿಕೃತ ಬಡಾವಣೆಗಳು ನಿರ್ಮಾಣಗೊಳ್ಳಲು ಕಾರಣವಾದ ಅಂಶಗಳು ಮತ್ತು ಎಷ್ಟು ವರ್ಷಗಳಿಗೊಮ್ಮೆ ಈ ಯೋಜನಾ ನಕ್ಷೆ ನವೀಕರಿಸಲಾಗುತ್ತಿದೆ ಹಾಗೂ ನವೀಕರಿಸಲಾದ ಯೋಜನೆಗಳ ಪ್ರಕಾರ ನಗರಗಳ ಅಭಿವೃದ್ಧಿ ಸಾಧ್ಯವೇ; ಸಾಧ್ಯವಿಲ್ಲದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ನಿಯಮ 330 ರಡಿಯಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ.

**ಉತ್ತರ:**

ರಾಜ್ಯದಲ್ಲಿ ನಗರಾಭಿವೃದ್ಧಿ ಮತ್ತು ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4-ಎ ರನ್ವಯ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗುತ್ತದೆ.

ನಗರಗಳ ಯೋಜನಾ ಬದ್ಧ ಬೆಳವಣಿಗೆ / ಸುಸಜ್ಜಿತ ಅಭಿವೃದ್ಧಿ ಹೊಂದುವ ಉದ್ದೇಶದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಡಿಯಲ್ಲಿ ಮಹಾಯೋಜನೆ ಮತ್ತು ವಲಯ ನಿಯಮಾವಳಿಗಳನ್ನು ಸಿದ್ಧಪಡಿಸಲಾಗುತ್ತದೆ.

ನಗರಾಭಿವೃದ್ಧಿ / ನಗರ ಯೋಜನಾ ಪ್ರಾಧಿಕಾರಗಳು ಮಹಾಯೋಜನೆಯನ್ನು ಸಾರ್ವಜನಿಕರ ಅಭಿಪ್ರಾಯದೊಂದಿಗೆ ಹಾಗೂ ಪ್ರಾಧಿಕಾರದ ಸಮಿತಿ ನಿರ್ಧಾರದಂತೆ ಯೋಜನಾ ಬದ್ಧವಾಗಿ ಭೂ ಉಪಯೋಗಗಳನ್ನು ಹಾಗೂ ರಸ್ತೆ ಪರಿಚಲನೆಯನ್ನು ಮುಂದಿನ 20 ರಿಂದ 30 ವರ್ಷಗಳ ಯೋಜನಾ ಅವಧಿಗೆ ಮಹಾಯೋಜನೆಯನ್ನು ತಯಾರಿಸಲಾಗುತ್ತದೆ.

ನಗರಾಭಿವೃದ್ಧಿ/ಯೋಜನಾ ಪ್ರಾಧಿಕಾರಗಳು ತಮ್ಮ ವ್ಯಾಪ್ತಿಯಲ್ಲಿನ ಚಾಲ್ತಿ ಮಹಾಯೋಜನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13-ಡಿ ರಡಿ ಮಹಾಯೋಜನೆ ಅನುಮೋದನೆಗೊಂಡು 10 ವರ್ಷಗಳು ಕಳೆದ ನಂತರ ಸದರಿ ಮಹಾಯೋಜನೆಯನ್ನು ಪರಿಷ್ಕರಿಸಲಾಗುವುದು.

ಸ್ಥಳೀಯ ಯೋಜನಾ ಪ್ರದೇಶದ ಯೋಜನಾಬದ್ಧ ಬೆಳವಣಿಗೆಗಾಗಿ ಪ್ರಾಧಿಕಾರಗಳು ವಸತಿ ಯೋಜನೆಯನ್ನು ಹಾಗೂ ಖಾಸಗಿ ವಿನ್ಯಾಸಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 ರಡಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗುತ್ತದೆ. ಇದರಿಂದ ನಗರದ ಯೋಜನಾಬದ್ಧ ಬೆಳವಣಿಗೆಗೆ ಅವಕಾಶ ಕಲ್ಪಿಸಲಾಗಿದೆ.

ಖಾಸಗಿ ವಿನ್ಯಾಸ ಅನುಮೋದನೆ ಸಮಯದಲ್ಲಿ ಅನುಮೋದನೆಯಾಗಿರುವ ಮಹಾಯೋಜನೆಯಂತೆ ಮತ್ತು ವಲಯ ನಿಯಮಾವಳಿಗಳಂತೆ ಅಗತ್ಯ ಅಗಲ ಹೊಂದಿರುವ ರಸ್ತೆಗಳನ್ನು/ ರಸ್ತೆ ಅಗಲೀಕರಣಗಳನ್ನು / ಉದ್ಯಾನವನಗಳನ್ನು / ನಾಗರೀಕ ಸೌಲಭ್ಯದ ನಿವೇಶನಗಳನ್ನು / ವಾಹನ ನಿಲುಗಡೆಗಳನ್ನು ಕಡ್ಡಾಯವಾಗಿ ಅಳವಡಿಸಿ, ಖಾಸಗಿ ವಿನ್ಯಾಸವನ್ನು ಅನುಮೋದಿಸಲಾಗುತ್ತದೆ. ಇದರಿಂದ ಮಹಾಯೋಜನೆ / ಪರಿಷ್ಕೃತ ಮಹಾಯೋಜನೆಯಂತೆ ನಗರಗಳ ವ್ಯವಸ್ಥಿತ ಬೆಳವಣಿಗೆ ಹಾಗೂ ಅಭಿವೃದ್ಧಿ ಸಾಧ್ಯವಾಗುತ್ತದೆ.

ಆದರೆ, ಕೆಲವು ಅನಧಿಕೃತ ಬಡಾವಣೆಗಳ ಅಭಿವೃದ್ಧಿದಾರರು / ಖಾಸಗಿ ಅಭಿವೃದ್ಧಿದಾರರು ಸಕ್ಷಮ ಪ್ರಾಧಿಕಾರಗಳಿಂದ ನಿಯಮಾನುಸಾರ ಅನುಮೋದನೆ ಪಡೆಯದೇ ಮೂಲಭೂತ ಸೌಕರ್ಯಗಳಾದ ರಸ್ತೆ, ಉದ್ಯಾನವನ/ಬಯಲು ಜಾಗ, ನಾಗರೀಕ ಸೌಲಭ್ಯದ ನಿವೇಶನ ನೀರು ಮತ್ತು ವಿದ್ಯುತ್ ಸಂಪರ್ಕಗಳನ್ನು ಕಲ್ಪಿಸದೇ ಅನಧಿಕೃತವಾಗಿ ನಿವೇಶನಗಳನ್ನು ರಚಿಸಿ ಬಡಾವಣೆಗಳನ್ನು ಅಭಿವೃದ್ಧಿ ಪಡಿಸುತ್ತಿರುವುದರಿಂದ, ಇಂತಹ **ಅನಧಿಕೃತ ವಿನ್ಯಾಸಗಳಲ್ಲಿ ಕಾಯ್ದೆ / ನಿಯಮಗಳು / ಮಹಾಯೋಜನೆ / ವಲಯ ನಿಯಮಾವಳಿಗಳನ್ನು ಪಾಲಿಸದೇ ಇರುವುದರಿಂದ** ಅನಧಿಕೃತ ಬಡಾವಣೆಗಳು ನಿರ್ಮಾಣವಾಗಲು ಕಾರಣವಾಗುತ್ತಿದೆ.

ಸ್ಥಳೀಯ ಯೋಜನಾ ಪ್ರದೇಶಗಳ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ, ಇಂತಹ ಬಡಾವಣೆಗಳಲ್ಲಿನ ನಿವೇಶನಗಳಿಗೆ ಕಟ್ಟಡ ಪರವಾನಿಗೆಗೆ ತಾಂತ್ರಿಕ ಅಭಿಪ್ರಾಯ ನೀಡದಂತೆ ಸುತ್ತೋಲೆ ದಿನಾಂಕ:22.01.2016 ಮತ್ತು ದಿನಾಂಕ:04.05.2017 ರಲ್ಲಿ ನಿರ್ದೇಶನ ನೀಡಲಾಗಿದೆ.

ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಕಾಯ್ದೆ/ ನಿಯಮಗಳನ್ನು ಉಲ್ಲಂಘಿಸಿ ಅನಧಿಕೃತ ಅಭಿವೃದ್ಧಿ / ಬೆಳವಣಿಗೆಗಳನ್ನು ತಡೆಗಟ್ಟಲು ವಿಫಲರಾದ ಸಂಬಂಧಿಸಿದ ಪ್ರಾಧಿಕಾರಗಳ ಅಧಿಕಾರಿಗಳಿಗೆ ಸೂಕ್ತ ದಂಡನೆ ವಿಧಿಸಲು KTCP ಕಾಯ್ದೆ 1961ರ ಕಲಂ 76FFF "Penalty against jurisdictional officer failing to prevent unauthorized deviations or constructions" ರಡಿಯಲ್ಲಿ The Karnataka Planning Authority (levy of penalty on jurisdictional officer for failure to prevent unauthorized development)Rules, 2021ರ ನಿಯಮಗಳನ್ನು ರೂಪಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 03 ಟಿಟಿಪಿ 2020(ಇ) ದಿನಾಂಕ:08.04.2025 ನ್ನು ಹೊರಡಿಸಲಾಗಿದೆ. ಅದರಂತೆ ಕ್ರಮವಹಿಸಲಾಗುವುದು.

ಕಡತ ಸಂಖ್ಯೆ: ನಅಇ 250 ಬೆಮಪ್ರಾ 2025 (ಇ)

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು